

# ಪ್ರವಾಸ ಮತ್ತು ಸಂತೋಷದ ವ್ಯಾಖ್ಯೆ

**ಪ್ರವಾಸದಲ್ಲಿ ದೊರೆಯುವ ಸಂತೋಷವನ್ನು ಮನೆಯಲ್ಲಿದ್ದುಕೊಂಡು ಅನುಭವಿಸುವುದು ಸಾಧ್ಯವಿಲ್ಲವೇ?**

■ ಸ್ವಯಂಪ್ರಭಾ

ಬೇಸಿಗೆಯೊಂದಿಗೆ ತಳಕು ಹಾಕಿಕೊಳ್ಳುವ ಸುಂದರ ಸಂಗತಿಗಳಲ್ಲಿ ಪ್ರವಾಸ ಮುಖ್ಯವಾದುದು. ಇತ್ತೀಚೆಗೆ ಪುಟಾಣಿ ಸನ್ನಿಧಿಯೊಂದಿಗೆ ಪ್ರಭಾಕರ್ ಅವರು ಕುಟುಂಬ ಸಮೇತ ಒಂದು ರೆಸಾರ್ಟ್‌ಗೆ ಹೋಗಿದ್ದರು. ಅಲ್ಲಿ ಈಜು, ಆಟೋಟ, ವಿವಿಧ ಗೇಮ್ಸ್‌ಗಳನ್ನು ಆಡಲು ಬೇಕಾದ ಸಲಕರಣೆಗಳು ಇದ್ದುದರಿಂದ ಭರ್ಜರಿಯಾಗಿ ದಿನವಿಡೀ ಆಟವಾಡಿ ಬಂದರು. ಸಮಯವನ್ನು ಹೇಗೆ ಕಳೆಯಬೇಕು ಎಂಬ ಒಂದು ಚೌಕಟ್ಟು ರೆಸಾರ್ಟ್ ಸಿಬ್ಬಂದಿಯ ಬಳಿಯಿತ್ತು. ಗ್ರಾಹಕರು ತಮ್ಮ ಸಮಯವನ್ನು ಮತ್ತು ಮೊಬೈಲ್ ಅನ್ನು ಸಿಬ್ಬಂದಿಯ ಕೈಗೆ ಒಪ್ಪಿಸಿಬಿಟ್ಟರೆ ಆಯಿತು. ಬೇಕಾದ ವಿಡಿಯೊ ಫೋಟೊಗಳನ್ನೂ ಸಿಬ್ಬಂದಿಯೇ ತೆಗೆದುಕೊಡುತ್ತಿದ್ದರು. ಆದ್ದರಿಂದ ಮಕ್ಕಳಿಗೆ ಅಪ್ಪ ಅಮ್ಮ ಸಂಪೂರ್ಣವಾಗಿ ದೊರೆಯುತ್ತಿದ್ದರು.

ರೆಸಾರ್ಟ್‌ಗೆ ಹೋಗಿ ಬಂದ ಮೇಲೆ, ಸನ್ನಿಧಿಯ ಅಮ್ಮನ ಮೊಬೈಲ್ ತುಂಬಾ ಆಟೋಟದ ಫೋಟೊಗಳು ವಿಡಿಯೊಗಳಿದ್ದವು. ತಾನು ಆಡಿದ ನೀರಾಟವನ್ನು ಮತ್ತೆ ಮತ್ತೆ ನೋಡುವ ಉಮೇದಿ ಪುಟಾಣಿಗೆ. ಇನ್ನೂ ನಾಲ್ಕನೇ ತರಗತಿಯ ವಿದ್ಯಾರ್ಥಿನಿ ಸನ್ನಿಧಿ, ತಾನು ಆಟವಾಡಿದ ಕ್ಷಣಗಳನ್ನು ಮತ್ತೆ ಮತ್ತೆ ಚಪ್ಪರಿಸಲು, ಅದೇ ವಿಡಿಯೊವನ್ನು, ಫೋಟೊಗಳನ್ನು ನೋಡುತ್ತ ಖುಷಿ ಪಡುತ್ತಿದ್ದಳು. ಬೇಸಿಗೆ ರಜೆಯೆಂದು ದೊರೆತ ಸುಮಾರು ಒಂದೂವರೆ ತಿಂಗಳಲ್ಲಿ ಈ ವಿಡಿಯೊ ಮತ್ತು ಫೋಟೊಗಳು ನೂರಾರು ಬಾರಿ ಮೊಬೈಲ್‌ನಲ್ಲಿ ಮಿನುಗಿ ಮಿನುಗಿ ಗ್ಯಾಲರಿಯೊಳಗೆ ಅವಿತುಕೊಳ್ಳುತ್ತಿದ್ದವು.

ಸನ್ನಿಧಿಯ ಮನೆಯ ಕತೆಯಷ್ಟೇ ಅಲ್ಲ, ಅತ್ತ ಸಾನ್ವಿಯ ಅಮ್ಮನೂ ಹೀಗೆಯೇ ಫೋಟೊ ವಿಡಿಯೊಗಳ ಲೋಕದಲ್ಲಿ ಮುಳುಗಿದ್ದರು. ಯಾವ ಮೊತ್ತಕ್ಕೆ ಎಲ್ಲಿ ಒಳ್ಳೆಯ ಸೌಕರ್ಯಗಳು ಸಿಗುತ್ತವೆ, ಮಕ್ಕಳನ್ನು ಇಡೀ ದಿವಸ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದಕ್ಕೆ ಏನೇನು ಅವಕಾಶಗಳಿವೆ ಎಂದೆಲ್ಲ ಹುಡುಕಾಟ ಆರಂಭಿಸಿದ್ದರು. ಆದರೆ ಸಾನ್ವಿಯ ದೊಡ್ಡತ್ತೆಯದು ಬೇರೆಯದೇ ಅಭಿಪ್ರಾಯ: ‘ಬೇಸಿಗೆಯಲ್ಲಿ ಪ್ರವಾಸ ಹೋಗಲೇಬೇಕು ಎಂದೇನಿಲ್ಲ. ರಜೆಯೆಂದರೆ ಎಲ್ಲರೂ ಒಟ್ಟಾಗಿ ಮನೆಯಲ್ಲಿಯೂ ಸಂತೋಷದಿಂದ ಇರಬಹುದಲ್ಲವೇ?’

ಅನೇಕ ಬಾರಿ, ರಜೆಯೆಂದರೆ ‘ಪ್ರವಾಸ ಹೋಗಲೇಬೇಕೇನೋ’ ಎಂಬಂತೆ ಮನೆಯ ಹಿರಿಯರು ವರ್ತಿಸುವುದುಂಟು. ಎಲ್ಲರೂ ಒಟ್ಟಾಗಿ ಪ್ರವಾಸಕ್ಕೆ ಹೋದಾಗ ಸಂತೋಷವಾಗಿರುವುದಕ್ಕೆ ಅನೇಕ ಸಂದರ್ಭಗಳು ಒದಗಿಬರುತ್ತವೆ ಎಂಬುದೇನೋ ನಿಜ. ಆದರೆ ರಜೆಯೆಂದ ತಕ್ಷಣ ಪ್ರವಾಸವೊಂದೇ ನಮ್ಮನ್ನು ಸಂತೋಷವಾಗಿರಿಸುತ್ತದೆ ಎಂಬುದೇನೂ ನಿಜವಲ್ಲ. ಸಂತೋಷದ ವ್ಯಾಖ್ಯೆಗಳು ಪ್ರವಾಸದಲ್ಲಷ್ಟೇ ಅಡಗಿರುತ್ತವೆ ಎನ್ನುವಂತಿಲ್ಲ.

ರಜೆ ಸಮಯದಲ್ಲಿ ಪೋಷಕರು ಮೊಬೈಲ್ ಅಥವಾ ಲ್ಯಾಪ್‌ಟಾಪ್‌ಲ್ಲಿ ಹೊಸ ಹೊಸ ಪೋಸ್ಟ್‌ಗಳನ್ನು ಹಾಕುತ್ತ, ಬಂದ ಕಮೆಂಟುಗಳನ್ನು ಗಮನಿಸುತ್ತ, ತಮ್ಮ ತಮ್ಮ ಸ್ನೇಹಿತರು ಭೇಟಿ ನೀಡಿದ ಪ್ರದೇಶಗಳ ಮಾಹಿತಿ ಕಲೆಹಾಕುತ್ತ ಬಹಳ ಸಮಯವನ್ನು ವ್ಯರ್ಥ ಮಾಡುವುದುಂಟು. ಆ ಪೋಸ್ಟ್‌ಗಳನ್ನೇ ಮಕ್ಕಳಿಗೆ ತೋರಿಸಿ ಸುಂದರವಾಗಿರುವ ಪ್ರವಾಸಿ ತಾಣಗಳು, ರೆಸಾರ್ಟ್‌ಗಳ ಮಾಹಿತಿಯ ಮಹಾಪೂರದಲ್ಲಿ ತಮ್ಮ ಬದುಕಿನ ಸಮಯವನ್ನು ದುಂದುವೆಚ್ಚ ಮಾಡುವುದುಂಟು. ಅದೇ ಸಮಯವನ್ನು ಮಕ್ಕಳೊಡನೆ ಗ್ಯಾಜೆಟ್ ಬಳಸದೇ ಪೂರ್ತಿಯಾಗಿ ಗಮನವಿರಿಸಿ ಕಳೆಯಬಹುದಲ್ಲವೇ.

ಫೋಟೊಗಳು, ವಿಡಿಯೊಗಳು ಮತ್ತು ರೀಲ್‌ಗಳ ವೀಕ್ಷಣೆಯು ಆ ಕ್ಷಣಕ್ಕೆ ಮಕ್ಕಳಿಗೂ ಖುಷಿ ಕೊಡಬಹುದೇನೋ. ಆದರೆ ಅಂತಹ ಖುಷಿಗಳು ಸಾಮಾಜಿಕ ಜಾಲತಾಣದಲ್ಲಿ ಅವರಿಗೆ ಸದಾ ಲಭ್ಯವಿರುತ್ತದೆ. ಅವರಿಗೆ ಮತ್ತೆಲ್ಲಿಯೂ ಲಭ್ಯವಾಗದ ಕ್ಷಣಗಳು ಪೋಷಕರ ಕೈಯಲ್ಲಿರುತ್ತವೆ. ಅವುಗಳೆಂದರೆ, ಸಂಜೆ ಟೆರೇಸಿನಲ್ಲಿ ಎಲ್ಲರೂ ಒಟ್ಟಾಗಿ ಕುಳಿತು ಊಟ ಮಾಡುವ ಖುಷಿ, ಟೀವಿ ಆಫ್ ಮಾಡಿ, ಡೈನಿಂಗ್ ಟೇಬಲ್ ಸುತ್ತ ಕುಳಿತು ಕೈ ತುತ್ತು ಹಾಕಿಸಿಕೊಳ್ಳುವ ಖುಷಿ, ಒಂದು ಬೆಳಗು ಎಲ್ಲರೂ ಪರಸ್ಪರರಿಗೆ ಎಳ್ಳೆಣ್ಣೆ ಪೂಸಿಕೊಂಡು, ಒಬ್ಬರ ಬೆನ್ನು ಮತ್ತೊಬ್ಬರು ತಿಕ್ಕಿ, ಚೆಂದಾಗಿ ಸ್ನಾನ ಮಾಡುವ ಖುಷಿ, ಸಂಜೆಯೊಂದು ನೆಟ್‌ಫ್ಲಿಕ್ಸ್‌ನಲ್ಲಿ ಗಮ್ಮತ್ತಾಗಿರುವ ಕಾಮಿಡಿ ಸಿನಿಮಾ ನೋಡುತ್ತ ಬಿದ್ದು ಬಿದ್ದು ನಗುವ ಸಂದರ್ಭ, ಗಾರ್ಡನ್‌ಗೆ ನೀರು ಬಿಡುತ್ತಾ ಆಟವಾಡುತ್ತ ಸಂಜೆ ಸೂರ್ಯಾಸ್ತದ ಬಣ್ಣಗಳನ್ನು ನೋಡುವ ಖುಷಿಯನ್ನು ಯಾವ ಸಾಮಾಜಿಕ ಜಾಲತಾಣವೂ ನೀಡಲಾರದು.

ಆದರೆ ಬೇಸಿಗೆ ರಜೆಯಲ್ಲಿ ಒಂದೊಂದು ತರಗತಿಯನ್ನು ಹಚ್ಚಿ ಪುಟಾಣಿ ಮಕ್ಕಳನ್ನು ಮತ್ತೆ ಟೈಮ್ ಟೇಬಲ್ ಒಳಗೇ ಬಂಧಿಯಾಗುವಂತೆ ಮಾಡಬೇಡಿ. ಯಾಕೆಂದರೆ ಹೈಸ್ಕೂಲು ದಾಟುತ್ತಲೇ ಅವರು ರಜೆಯ ದಿನಗಳನ್ನು ಒಂದಲ್ಲ ಒಂದು ರೀತಿಯ ತರಗತಿಗಳ ಚೌಕಟ್ಟಿನಲ್ಲಿಯೇ ಕಳೆಯುವುದು ಅನಿವಾರ್ಯವಾಗಿಬಿಡುತ್ತದೆ. ಆದ್ದರಿಂದ ಪುಟಾಣಿ ಮಕ್ಕಳು, ಹಾಡಿ ನಲಿದು ಖುಷಿಯಾಗಿರುವ, ಮುಕ್ತವಾಗಿರುವ ಅವಕಾಶಗಳನ್ನು ಕುಬ್ಜಗೊಳಿಸಬೇಡಿರಿ.

ಮನೆಯೊಳಗಿನ ಪ್ರೀತಿಗೆ ಹೆಚ್ಚಿನ ಆದ್ಯತೆಯಿದ್ದರೆ ಬೇಸಿಗೆ ರಜೆ ಸುಂದರವಾಗಿ ಕಳೆದಂತೆಯೇ ಸೈ.

ಪ್ರತಿಕ್ರಿಯಿಸಿ: feedback@sudha.co.in